**ಸಾಕ್ಷಿಯನ್ನು ದಿನಾಂಕ** ***27.03.2026*** **ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಠಾಣೆಯಿಂದ ಅಮಾನತ್ತು ಪಂಚನಾಮೆಯ ಸಾಕ್ಷಿಗಳನ್ನು ಬರಮಾಡಿಕೊಂಡು ಕರೆದುಕೊಂಡು ಹೋಗಿರಲಿಲ್ಲ ರಸ್ತೆಯಲ್ಲಿ ಬರುತ್ತಿದ್ದವರಿಗೆ ಮಾಹಿತಿ ತಿಳಿಸಿ ಪಂಚರನ್ನಾಗಿ ಮಾಡಿಕೊಂಡಿದ್ದೆವು. ಪಂಚನಾಮೆಯನ್ನು ಇನ್ಸ್ ಪೆಕ್ಟರ್ ಹೇಳಿದ ರೀತಿಯಲ್ಲಿ ಸಿಬ್ಬಂದಿಯವರು ಬರೆದಿದ್ದರು. ಆರೋಪಿತರು ದಾಖಲಾತಿಗಳನ್ನು ತೆಗೆದು ತೆಗೆದು ಕೊಡುತ್ತಿದ್ದರು ಇನ್ಸ್ ಪೆಕ್ಟರ್ ರವರು ಆ ದಾಖಲಾತಿಗಳನ್ನು ಪಡೆದುಕೊಂಡು ಕ್ರಮವಾಗಿ ಜೋಡಿಸಿಕೊಳ್ಳುತ್ತಿದ್ದರು. ಸವಿತಾ ಎಂ. ಮತ್ತು ಸವಿತ ಮಲ್ಲೇಶ್ ಬೇರೆ ಬೇರೆ ವ್ಯಕ್ತಿಗಳೋ ಅಥವಾ ಒಬ್ಬರೇ ವ್ಯಕ್ತಿಗಳ ಎನ್ನುವ ಬಗ್ಗೆ ಈಗ ನನಗೆ ನೆನಪಾಗುತ್ತಿಲ್ಲ. ಪ್ರಸಾದ್ ಮತ್ತು ಪ್ರಸಾದ್ ಆರ್. ಬೈರಣ್ಣ ಬೇರೆ ಬೇರೆ ವ್ಯಕ್ತಿಗಳೋ ಅಥವಾ ಒಬ್ಬರೇ ವ್ಯಕ್ತಿಗಳ ಎನ್ನುವ ಬಗ್ಗೆ ಈಗ ನನಗೆ ನೆನಪಾಗುತ್ತಿಲ್ಲ. ಸವಿತಾ ಎಂ. ಮತ್ತು ಸವಿತಾ ಮಲ್ಲೇಶ್ ಹಾಗೂ ಸವಿತಾ ಒಂದೇ ವ್ಯಕ್ತಿ ಎಂದರೆ ಆ ಬಗ್ಗೆ ನನಗೆ ಈಗ ಹೇಳಲು ಆಗುವುದಿಲ್ಲ. ಪ್ರಸಾದ್ ಮತ್ತು ಪ್ರಸಾದ್ ಆರ್. ಬೈರಣ್ಣ ಒಂದೇ ವ್ಯಕ್ತಿ ಎಂದರೆ ಆ ಬಗ್ಗೆ ನನಗೆ ಈಗ ಹೇಳಲು ಆಗುವುದಿಲ್ಲ. ಸವಿತಾ ಮಲ್ಲೇಶ್ ರವರು ಪ್ರಸಾದ್ ಆರ್. ಬೈರಣ್ಣ ರವರ ಹೆಂಡತಿ ಎಂದರೆ ಸರಿ.

ನಿಪಿ-23 ಅನ್ನು ಸವಿತಾ ಮಲ್ಲೇಶ್ ಮತ್ತು ಪ್ರಸಾದ್ ಆರ್. ಬೈರಣ್ಣ ರವರ ಕಡೆಯಿಂದ ಆರೋಪಿತರು ಸರ್ವೆ ನಂಬರ್ 120/2 ಕ್ಷೇತ್ರ 2 ಎಕರೆ 38 ಗುಂಟೆ ಜಮೀನಿಗೆ ಸಂಬಂಧಪಟ್ಟ ನೊಂದಾಯಿತವಲ್ಲದ ಖರೀದಿ ಕರಾರು ಪತ್ರ ಎಂದರೆ ನನಗೆ ನೆನಪಾಗುತ್ತಿಲ್ಲ. ಆರೋಪಿತರು ಸವಿತಾ ಮಲ್ಲೇಶ್ ಮತ್ತು ಪ್ರಸಾದ್ ಆರ್. ಬೈರಣ್ಣ ರವರಿಗೆ ಸುಮಾರು 42,00,000/- ರೂ ಹಣವನ್ನು ನಗದು ರೂಪದಲ್ಲಿ ಕೊಟ್ಟಿದ್ದರಿಂದ ಸವಿತಾ ಮಲ್ಲೇಶ್ ರವರು 4 ಖಾಲಿ ಚೆಕ್ ಗಳನ್ನು ಭದ್ರತೆಗಾಗಿ ಕೊಟ್ಟಿದ್ದರು ಎಂದರೆ ಈಗ ನನಗೆ ನೆನಪಾಗುತ್ತಿಲ್ಲ. ಖರೀದಿ ಕರಾರು ಪತ್ರ ಆದ ಮೇಲೆ ಆರೋಪಿತರು ಸದರಿ ಅವರ ಕಡೆಯಿಂದ ನಿಪಿ-24 ರ ದಾನ ಪತ್ರವನ್ನು ಪಡೆದುಕೊಂಡಿದ್ದರು ಎಂದರೆ ಈ ಬಗ್ಗೆ ನೆನಪಾಗುತ್ತಿಲ್ಲ. ಸವಿತಾ ಮಲ್ಲೇಶ್ ರವರಿಂದ ಪಡೆದುಕೊಂಡಿದ್ದ 4 ಚೆಕ್ ಗಳು ನಾನು ಈಗ ಚೆಕ್ ಗಳು ಇರುತ್ತವೆ. ಸಾಕ್ಷಿದಾರರು ನೋಡಿ ಹೇಳಿದಂತಹ ಚೆಕ್ ಗಳನ್ನು ಈಗಾಗಲೇ ನಿಪಿ-41(ಜಿ) ಎಂದು ಗುರುತಿಸಲ್ಪಟ್ಟಿರುತ್ತವೆ. ಆರೋಪಿತರು ಕ್ರಯದ ಮುಂಗಡ ಬಾಬ್ತು ಕೊಟ್ಟಂತಹ ಹಣಕ್ಕೆ ಸಂಬಂಧಪಟ್ಟಂತೆ ನಿಪಿ-41 ಮತ್ತು ನಿಪಿ-41(ಹೆಚ್ ) ದಾಖಲೆಗಳನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಈಗ ನೆನಪಾಗುತ್ತಿಲ್ಲ. ಆರೋಪಿತರು ಕ್ರಯದ ಉದ್ದೇಶಕ್ಕಾಗಿ ನಿಪಿ-41(ಜೆ) ಮತ್ತು 41(ಕೆ) ದಾಖಲೆಗಳನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಈಗ ನೆನಪಾಗುತ್ತಿಲ್ಲ. ಸ್ವತ್ತಿನ ಇತರೆ ದಾಖಲೆಗಳನ್ನು ಸಹ ಪಡೆದುಕೊಂಡಿದ್ದರು ಎಂದರೆ ನನಗೆ ಈಗ ನೆನಪಾಗುತ್ತಿಲ್ಲ ಏಕೆಂದರೆ ಎಲ್ಲಾ ದಾಖಲೆಗಳನ್ನು ಇನ್ಸ್‌ಪೆಕ್ಟರ್ ರವರು ತೆಗೆದುಕೊಂಡಿದ್ದರು ಅವರ ಜೊತೆಯಲ್ಲಿ ನಾನು ಇದ್ದೆ. ಪಂಚನಾಮೆಯಲ್ಲಿ ಕ್ರಮ ಬದ್ದವಾಗಿ

ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಒಂದೇ ಕಡೆ ಹೇಳಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-22 ಆರೋಪಿಗೆ ಸಂಬಂಧ ಇಲ್ಲದ ದಾಖಲಾತಿ ಇರುತ್ತದೆ ಎಂದರೆ ಸದರಿ ದಾಖಲಾತಿಯನ್ನು ಆರೋಪಿತರೇ ತೆಗೆದುಕೊಟ್ಟಿದ್ದರು. ನಿಪಿ-45 ಆರೋಪಿಗೆ ಸಂಬಂಧ ಇಲ್ಲದ ದಾಖಲಾತಿ ಇರುತ್ತದೆ ಎಂದರೆ ಸರಿಯಲ್ಲ. ಅವರೇ ತೆಗೆದುಕೊಟ್ಟಿದ್ದರು. ನಿಪಿ-13 ರಿಂದ 17 ರ ದಾಖಲೆಗಳು ಆರೋಪಿಗೆ ಸಂಬಂಧ ಇಲ್ಲದ ದಾಖಲಾತಿ ಇರುತ್ತವೆ ಎಂದರೆ ಸರಿಯಲ್ಲ. ಅವರೇ ತೆಗೆದುಕೊಟ್ಟಿದ್ದರು. ನಿಪಿ-46 ದಾಖಲೆ ಆರೋಪಿಗೆ ಸಂಬಂಧ ಇಲ್ಲದ ದಾಖಲಾತಿ ಇರುತ್ತದೆ ಎಂದರೆ ಸರಿಯಲ್ಲ. ಅವರೇ ತೆಗೆದುಕೊಟ್ಟಿದ್ದರು. ನಿಪಿ-28 ದಾಖಲಾತಿಯನ್ನು ವನಿತಾ ಮತ್ತು ಭವ್ಯ ಆರೋಪತರ ಕಡೆ ಕೊಟ್ಟಿದ್ದರು ಆ ದಾಖಲೆಯನ್ನು ಸುವರ್ಣ ರವರು ತೆಗೆದುಕೊಂಡು ಹೋಗಿರಲಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಆರೋಪಿತರೇ ದಾಖಲೆಯನ್ನು ಕೊಟ್ಟಿದ್ದರು. ನಿಪಿ-47 ರ ದಾಖಲೆ ಆರೋಪಿತರಿಗೆ ಸಂಬಂಧ ಇಲ್ಲದೇ ಇದ್ದರೂ ಸಹ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರೇ ಕೊಟ್ಟಿದ್ದರು. ನಿಪಿ-48 ರಿಂದ 54 ರ ದಾಖಲಾತಿಗಳು ಈ ಪ್ರಕರಣಕ್ಕೆ ಸಂಬಂಧ ಪಡದ ದಾಖಲೆಗಳು ಇದ್ದರೂ ಸಹ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರೇ ಕೊಟ್ಟಿದ್ದರು. ನಿಶಾನೆಯಾಗಿ ಒಳಪಡಿಸಿರುವ ದಾಖಲೆಗಳು ಅಲ್ಲದೇ ಬೇರೆ ದಾಖಲೆಗಳನ್ನು ಸಹ ಪಡೆದುಕೊಂಡು ಪ್ರಕರಣಕ್ಕೆ ಅವಶ್ಯಕತೆ ಇಲ್ಲದಂತಹ ದಾಖಲೆಗಳನ್ನು ಸಹ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಇನ್ಸ್ ಪೆಕ್ಟರ್ ರವರು ಪಡೆದುಕೊಂಡಿರುತ್ತಾರೆ.

***(ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ವನ್ನು ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)***

**ಮರು ವಿಚಾರಣೆ:– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*